**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/156/ಶೈವಿ/ರೆಡ್ ಕ್ರಾಸ್/2024-25

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-01, ದಿನಾಂಕ31-12-2025

**ಸುತ್ತೋಲೆ**

**ವಿಷಯ**: ಯುವ ರೆಡ್ ಕ್ರಾಸ್ ಘಟಕಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ನೋಂದಣಿ ಶುಲ್ಕ ಮತ್ತು ವಿದ್ಯಾರ್ಥಿಗಳ ಸದಸ್ಯತ್ವ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿ ಮಾಡುವ ಬಗ್ಗೆ.

**ಉಲ್ಲೇಖ**:
1. ಪ್ರಧಾನ ಕಾರ್ಯದರ್ಶಿಗಳು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ ಇವರ ಪತ್ರ ಸಂಖ್ಯೆ:IRCS/YRC/RF-SMF/2441/25-26 ದಿನಾಂಕ:15-11-2025.
2. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ/ಶೈವಿ/156/ರೆಡ್ ಕ್ರಾಸ್/ 2024-25, ದಿ:21-05-2025.
3. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ/ಶೈವಿ/03/ಸುತ್ತೋಲೆ/2024-25, ದಿ:11-06-2024.
4. ಸರ್ಕಾರದ ಆದೇಶ ಸಂಖ್ಯೆ:ಇಡಿ 38 ವಿವಿಧ 2016, ದಿ:17-06-2016.
5. ಸರ್ಕಾರದ ಆದೇಶ ಸಂಖ್ಯೆ:ಇಡಿ 64 ವಿವಿಧ 2011, ದಿ: 22-11-2011.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(4) ಮತ್ತು (5)ರ ಸರ್ಕಾರದ ಆದೇಶಗಳಲ್ಲಿ XVನೇ ಕೇಂದ್ರ ಅಧಿನಿಯಮ-1920 ರಡಿ ಸ್ಥಾಪಿತವಾದ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಬಹುಮುಖ್ಯ ಅಂಗವಾದ ರೆಡ್ ಕ್ರಾಸ್ ಘಟಕವನ್ನು ಪ್ರಾರಂಭಿಸಲು ಹಾಗೂ ಈ ಮೂಲಕ ಮಾನವೀಯತೆ, ನಿಷ್ಪಕ್ಷಪಾತ, ತಟಸ್ಥತೆ, ಅಪರತಂತ್ರ, ಸ್ವಯಂಸೇವಾ ಮನೋಧರ್ಮ ಹಾಗೂ ಸರ್ವಲೌಕಿಕತ್ವದಂತಹ ತತ್ವಗಳನ್ನು ವಿದ್ಯಾರ್ಥಿಗಳಲ್ಲಿ ಮೈಗೂಡಿಸುವ ನಿಟ್ಟಿನಲ್ಲಿ ಯುವ ರೆಡ್ ಕ್ರಾಸ್ ಹೊಂದಿರುವ ಸಂಕಲ್ಪ ಹಾಗೂ ಉದ್ದೇಶಗಳನ್ನು ಈಡೇರಿಸಲು ಹಾಗೂ ಆರೋಗ್ಯ, ನಾಗರೀಕ ಹೊಣೆಗಾರಿಕೆ, ಸದ್ಭಾವನೆ ಮತ್ತು ಸ್ವಯಂ ಸೇವಾ ಮನೋಧರ್ಮಗಳಂತಹ ಆದರ್ಶ ಮತ್ತು ಪರಿಪಾಠಗಳನ್ನು ಯುವಕರಲ್ಲಿ ಸದೃಢಗೊಳಿಸುವುದಕ್ಕೆ ಅಭಿಮುಖವಾದ ರೆಡ್ ಕ್ರಾಸ್‌ನ ಪ್ರಯತ್ನಗಳಲ್ಲಿ ನೆರವಾಗಲು ಅನುವಾಗುವಂತೆ, ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸ್ಪಷ್ಟ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿರುತ್ತದೆ.

ಅದರಂತೆ ಇಲಾಖಾ ವ್ಯಾಪ್ತಿಗೊಳಪಡುವ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳು ಯೂತ್ ರೆಡ್ ಕ್ರಾಸ್ ಘಟಕವನ್ನು ಸ್ಥಾಪಿಸಿ ರೂ.1500/- (ಒಂದು ಸಾವಿರದ ಐದು ನೂರು ರೂಪಾಯಿಗಳು ಮಾತ್ರ)ಗಳನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಿ ನೋಂದಾಯಿಸಿಕೊಳ್ಳುವಂತೆ ಮತ್ತು ಕಾಲೇಜಿನ ಪ್ರವೇಶಾತಿ ಸಮಯದಲ್ಲಿ ಪ್ರತಿ ವಿದ್ಯಾರ್ಥಿಗಳಿಂದ ಕಾಲೇಜು ಶುಲ್ಕವನ್ನು ಸಂಗ್ರಹಿಸುವಾಗ ಯೂತ್ ರೆಡ್ ಕ್ರಾಸ್ ಘಟಕದಡಿಯಲ್ಲಿ ವಾರ್ಷಿಕವಾಗಿ ರೂ.50/- ಗಳನ್ನು ಸಂಗ್ರಹಿಸುವಂತೆ ಹಾಗೂ ಸಂಗ್ರಹಿಸಿದ ಶುಲ್ಕದಲ್ಲಿ 30% (ರೂ.15/-) ಅನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಿ, ಉಳಿದ 70% (ರೂ.35/-) ಗಳನ್ನು ಕಾಲೇಜಿನ ಯುವ ರೆಡ್ ಕ್ರಾಸ್ ಚಟುವಟಿಕೆಗಳಿಗೆ ಬಳಸಿಕೊಳ್ಳುವಂತೆ ಆದೇಶಿಸಲಾಗಿದ್ದು, ಸದರಿ ನೋಂದಣಿ ಶುಲ್ಕ ಮತ್ತು ವಿದ್ಯಾರ್ಥಿ ಶುಲ್ಕವನ್ನು ಪಾವತಿಸಲು ಕಾಲೇಜುಗಳಿಗೆ ಅನುಕೂಲವಾಗುವಂತೆ, ಸಮಯ, ಹಣ ಮತ್ತು ಮಾನವ ಶ್ರಮವನ್ನು ಉಳಿಸಲು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ಸಾಫ್ಟ್ ವೇರ್ ಅಭಿವೃದ್ಧಿಪಡಿಸಿದೆ. ಶುಲ್ಕಗಳನ್ನು ಸದರಿ ಸಾಫ್ಟ್ ವೇರ್ ಮೂಲಕ ಪಾವತಿಸುವ ಬಗ್ಗೆ ವಿವರಗಳ **ಪ್ರತಿಯನ್ನು ಲಗತ್ತಿಸಿದೆ.**

ಆದ್ದರಿಂದ ಇದುವರೆವಿಗೂ ಯೂತ್ ರೆಡ್ ಕ್ರಾಸ್ ಘಟಕವನ್ನು ಸ್ಥಾಪಿಸದೇ ಇರುವ ಕಾಲೇಜುಗಳು ಕಡ್ಡಾಯವಾಗಿ ಸದರಿ ಘಟಕವನ್ನು ಸ್ಥಾಪಿಸಲು ಹಾಗೂ ನೋಂದಣಿ ಶುಲ್ಕವನ್ನು ಪಾವತಿಸಲು ತುರ್ತಾಗಿ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ:**

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ.
2. ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೀಜುಗಳ ಪ್ರಾಶುಂಪಾಲರುಗಳು ವರ್ಷವಾರು ಪಾವತಿಸಿದ ಮೂಲ ಡಿಡಿ/ಚೆಕ್ ಲಗತ್ತಿಸಿ ರೆಡ್ ಕ್ರಾಸ್ ಸಂಸ್ಥೆಗೆ ಸಲ್ಲಿಸಿ ಸ್ವೀಕೃತಿಯನ್ನು ತಪ್ಪದೇ ಪಡೆಯುವುದು.

**ಪ್ರತಿಯನ್ನು:**

1. ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ, ನಂ. 26 ರೆಡ್ ಕ್ರಾಸ್ ಭವನ, 1ನೇ ಮಹಡಿ ರೆಸ್ ಕೋರ್ಸ್ ರಸ್ತೆ, ಬೆಂಗಳೂರು-560001.
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,ಬೆಂಗಳೂರು ಈ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
3. ಕಛೇರಿ ಪ್ರತಿ.

THROUGH HUMANITY TO PEACE

ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ

# Indian Red Cross Society

(CONSTITUTED UNDER PARLIAMENT ACT XV OF 1920)

KARNATAKA STATE BRANCH

100 years of minimizing, alleviating and preventing human suffering

Phone : 080-22264205, 22352127

E-mail :ircskar@gmail.com, ircskarnataka@yahoo.in

Website : www.redcrosskarnataka.org

No. IRCS / YRC/RF-SMF/2441/25-26

Date : 15/11/2025

ಮಾನ್ಯ ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಉನ್ನತ ಶಿಕ್ಷಣ ಸೌಧ
ಶೇಷಾದ್ರಿ ರಸ್ತೆ
ಬೆಂಗಳೂರು.

ಸನ್ಮಾನ್ಯರಿಗೆ ಮಾಡುವ ನಮಸ್ಕಾರಗಳು

ವಿಷಯ: ಯುವ ರೆಡ್ ಕ್ರಾಸ್ ಘಟಕಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ನೋಂದಣಿ ಶುಲ್ಕ ಮತ್ತು ವಿದ್ಯಾರ್ಥಿಗಳ ಸದಸ್ಯತ್ವ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿ ಮಾಡುವ ಬಗ್ಗೆ ಸುತ್ತೋಲೆ ಹೊರಡಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ 64 ವಿವಿಧ 2011, ದಿನಾಂಕ: 22.12.201
2. ಸರ್ಕಾರದ ಆದೇಶ ಸಂಖ್ಯೆ: ಇಡಿ 38 ವಿವಿಧ 2016, ದಿನಾಂಕ: 17.06.2016

*******

ಮೇಲ್ಕಂಡ ಉಲ್ಲೇಖ (1) ಮತ್ತು (2) ರ ಸರ್ಕಾರದ ಆದೇಶಗಳಲ್ಲಿ XV ನೇ ಕೇಂದ್ರ ಅಧಿನಿಯಮ -1920ರಡಿ ಸ್ಥಾಪಿತವಾದ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಬಹುಮುಖ್ಯ ಅಂಗವಾದ ರೆಡ್ ಕ್ರಾಸ್ ಘಟಕವನ್ನು ಪ್ರಾರಂಭಿಸಲು ಹಾಗೂ ಈ ಮೂಲಕ ಮಾನವೀಯತೆ, ನಿಷ್ಪಕ್ಷಪಾತ, ತಟಸ್ಥತೆ, ಅಪರತಂತ್ರ, ಸ್ವಯಂಸೇವಾ ಮನೋಧರ್ಮ ಹಾಗೂ ಸರ್ವಲೌಕಿಕತ್ವದಂತಹ ತತ್ವಗಳನ್ನು ವಿದ್ಯಾರ್ಥಿಗಳಲ್ಲಿ ಮೈಗೂಡಿಸುವ ನಿಟ್ಟಿನಲ್ಲಿ ಯುವ ರೆಡ್ ಕ್ರಾಸ್ ಹೊಂದಿರುವ ಸಂಕಲ್ಪ ಹಾಗೂ ಉದ್ದೇಶಗಳನ್ನು ಈಡೇರಿಸಲು ಹಾಗೂ ಆರೋಗ್ಯ, ನಾಗರೀಕ ಹೊಣೆಗಾರಿಕೆ, ಸದ್ಭಾವನೆ ಮತ್ತು ಸ್ವಯಂ ಸೇವಾ ಮನೋಧರ್ಮಗಳಂತಹ ಆದರ್ಶ ಮತ್ತು ಪರಿಪಾಠಗಳನ್ನು ಯುವಕರಲ್ಲಿ ಸದೃಢಗೊಳಿಸುವುದಕ್ಕೆ ಅಭಿಮುಖವಾದ ರೆಡ್ ಕ್ರಾಸ್‌ನ ಪ್ರಯತ್ನಗಳಲ್ಲಿ ನೆರವಾಗಲು ಅನುವಾಗುವಂತೆ, ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸ್ಪಷ್ಟ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿರುತ್ತದೆ.

ಅದರಂತೆ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ವ್ಯಾಪ್ತಿಗೆ ಒಳಪಡುವ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳು ಯೂತ್ ರೆಡ್ ಕ್ರಾಸ್ ಘಟಕವನ್ನು ಸ್ಥಾಪಿಸಿ ರೂ.1500/- (ಒಂದು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) ಗಳನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಿ ನೋಂದಾಯಿಸಿಕೊಳ್ಳುವಂತೆಯು ಮತ್ತು ಕಾಲೇಜಿನ ಪ್ರವೇಶಾತಿ ಸಮಯದಲ್ಲಿ ಪ್ರತಿ ವಿದ್ಯಾರ್ಥಿಗಳಿಂದ ಕಾಲೇಜು ಶುಲ್ಕವನ್ನು ಸಂಗ್ರಹಿಸುವಾಗ ಯೂತ್ ರೆಡ್ ಕ್ರಾಸ್ ಘಟಕ ದಡಿಯಲ್ಲಿ ವಾರ್ಷಿಕವಾಗಿ ರೂ.50/- ಗಳನ್ನು ಸಂಗ್ರಹಿಸುವಂತೆಯು ಹಾಗೂ ಸಂಗ್ರಹಿಸಿದ ಶುಲ್ಕದಲ್ಲಿ 30% (ರೂ.15/-) ಅನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಿ, ಉಳಿದ 70% (ರೂ.35/-) ಗಳನ್ನು ಕಾಲೇಜಿನ ಯುವ ರೆಡ್ ಕ್ರಾಸ್ ಚಟುವಟಿಕೆಗಳಿಗೆ ಬಳಸಿಕೊಳ್ಳುವಂತೆ ಆದೇಶಿಸಲಾಗಿದೆ.

ನೋಂದಣಿ ಶುಲ್ಕ ಮತ್ತು ವಿದ್ಯಾರ್ಥಿ ಶುಲ್ಕವನ್ನು ಪಾವತಿಸಲು ಕಾಲೇಜುಗಳಿಗೆ ಅನುಕೂಲವಾಗುವಂತೆ, ಸಮಯ, ಹಣ ಮತ್ತು ಮಾನವ ಶ್ರಮವನ್ನು ಉಳಿಸಲು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿದೆ.

ಮುಂದುವರೆದು, ಸದರಿ ಶುಲ್ಕವನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ ಅಭಿವೃದ್ಧಿಪಡಿಸಿರುವ ಸಾಫ್ಟ್‌ವೇರ್ ಮೂಲಕ ಪಾವತಿಸುವ ವಿವರ ಈ ಕೆಳಗಿನಂತಿವೆ.

1148245
16/11/2025

----2

- ಮೊದಲು ಗೂಗಲ್‌ನಲ್ಲಿ - https://redcrosskarnataka.org/ ಎಂದು ನಮೂದಿಸಬೇಕು.
- ನಂತರ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯ ಅಧಿಕೃತ ವೆಬ್‌ಸೈಟ್ ತೆರೆದುಕೊಳ್ಳುತ್ತದೆ
- ಬಲ ಮೇಲ್ಭಾಗದಲ್ಲಿ ಇರುವ youth Red Cross Registration ಎಂಬ ಆಯ್ಕೆಯ ಮೇಲೆ ಕ್ಲಿಕ್ ಮಾಡಬೇಕು.
- ನಂತರ ಅರ್ಜಿ ನಮೂನೆ ತೆರೆದುಕೊಳ್ಳುತ್ತದೆ, ಇಲ್ಲಿ ತಮ್ಮ ಕಾಲೇಜಿನ AISHE( All India Survey of Higher Education) OR UUCMS (Unified University College Management system) ಸಂಖ್ಯೆ/ಕೋಡ್ ಅನ್ನು ನಮೂದಿಸಬೇಕು.
- ಸಂಖ್ಯೆ ನಮೂದಿಸದ ನಂತರ ಕೀ ಬೋರ್ಡ್‌ನಲ್ಲಿ Enter ಒತ್ತಬೇಕು.
- ನಿಮ್ಮ ಕಾಲೇಜಿನ ಹೆಸರು ಮತ್ತು ಇನ್ನಿತರ ಮಾಹಿತಿಗಳು ಸ್ವಯಂ ಭರ್ತಿಯಾಗುತ್ತದೆ (Auto populate)
- ನಂತರ ಅರ್ಜಿ ನಮೂನೆಯಲ್ಲಿ ಕೇಳಿರುವ ಎಲ್ಲಾ ಮಾಹಿತಿಗಳನ್ನು ಖಡ್ಡಾಯವಾಗಿ ಭರ್ತಿ ಮಾಡಬೇಕು.
- ಈಗಾಗಲೇ ತಮ್ಮ ಕಾಲೇಜು ನೋಂದಣಿಯಾಗಿದ್ದರೆ Already Registered ಎಂಬ ಆಯ್ಕೆಯನ್ನು ಆಯ್ಕೆಮಾಡಬೇಕು
- ನೋಂದಣಿಯಾಗಿರದಿದ್ದರೆ Not Registered ಎಂಬ ಆಯ್ಕೆಯನ್ನು ಆಯ್ಕೆ ಮಾಡಬೇಕು, ಆಯ್ಕೆ ಮಾಡಿದ ನಂತರ ಸ್ವಯಂ ನೋಂದಣಿ ಶುಲ್ಕ ರೂ.1500/- ಸೇರಿಕೊಳ್ಳುತ್ತದೆ.
- ಮುಂದೆ ವಿದ್ಯಾರ್ಥಿಗಳ ಸದಸ್ಯತ್ವ ಶುಲ್ಕ ಪಾವತಿ ನಮೂನೆಯಲ್ಲಿ ಒಟ್ಟು ವಿದ್ಯಾಥಿಗಳ ಸಂಖ್ಯೆಯನ್ನು ನಮೂದು ಮಾಡಬೇಕು (ಮೊದಲನೆ ಸೆಮಿಸ್ಟರನಿಂದ ಕೊನೆಯ ಸೆಮಿಸ್ಟರನ ಎಲ್ಲಾ ವಿದ್ಯಾರ್ಥಿಗಳು) ಪ್ರತಿ ವಿದ್ಯಾರ್ಥಿಗೆ ರೂ.15/- ರಂತೆ ಒಟ್ಟು ಶುಲ್ಕ ಲೆಕ್ಕಿಸಲಾಗುತ್ತದೆ.
- ಹಿಂದಿನ ವರ್ಷಗಳ ವಿದ್ಯಾರ್ಥಿಗಳ ಸದಸ್ಯತ್ವ ಶುಲ್ಕ ಪಾವತಿಸಲು Add year ಎಂಬ ಆಯ್ಕೆಯ ಮೇಲೆ ಕ್ಲಿಕ್ ಮಾಡಬೇಕು, ನಂತರ ಸಂಬಂದಿಸಿದ ವರ್ಷವನ್ನು ಆಯ್ಕೆ ಮಾಡಿ ಆವರ್ಷದ ವಿದ್ಯಾರ್ಥಿಗಳ ಸಂಖ್ಯೆಯನ್ನು ನಮೂದಿಸಬೇಕು (ಉದಾಹರಣೆ- 2017-18, 2018-2019, 2019-2020, 2020-2021, 2021-22, 2022-2023)
- ಹಿಂದಿನ ವರ್ಷ ಯುವ ರೆಡ್ ಕ್ರಾಸ್ ಘಟಕದಡಿ ನಡೆದ ಕಾರ್ಯಕ್ರಮಗಳ ವರದಿಯನ್ನು ಅಪ್ಲೋಡ್ ಮಾಡಲು ಆಯ್ಕೆ ನೀಡಲಾಗಿದೆ, ವರದಿ ಇದ್ದಲ್ಲಿ ಅಪ್ಲೋಡ್ ಮಾಡಬಹುದು
- ನಂತರ Pay Now ಎಂಬ ಆಯ್ಕೆಯ ಮೇಲೆ ಕ್ಲಿಕ್ ಮಾಡಿದಾಗ ಪಾವತಿ ಸ್ಕ್ಯಾನರ್ ತೆರೆದು ಕೊಳ್ಳುತ್ತದೆ, ಇಲ್ಲಿ ಯಾವುದೇ UPI ಮೂಲಕ ಪಾವತಿ ಮಾಡಬಹುದು
- ಪಾವತಿ ಯಶಸ್ವಿಯಾದ ನಂತರ, ತಾವು ನೀಡಿರುವ ಇಮೇಲ್ ವಿಳಾಸಕ್ಕೆ ಕೊಡಲೇ ನೋಂದಣಿ ಪ್ರಮಾಣ ಪತ್ರ ಮತ್ತು ರಶೀದಿ ಸ್ವಯಂ ಕಲುಹಿಸಲಾಗುತ್ತದೆ.
- ಒಂದು ವೇಳೆ UPI ಮೂಲಕ ಪಾವತಿ ಮಾಡಲು ಸಾದ್ಯವಾಗದಿದ್ದರ್ಲೆ, Pay Now ಮೇಲೆ ಕ್ಲಿಕ್ ಮಾಡಿದ ಬಳಿಕ ಬಲಭಾಗದಲ್ಲಿ ನೀಡಿರುವ ಭಾರತೀಯ ರೆಡ್ ಕ್ರಾಸ್ ಸಂಸ್ಥೆ-ಯುವ ರೆಡ್ ಕ್ರಾಸ್ ಬ್ಯಾಂಕ್ ಖಾತೆ ಸಂಖ್ಯೆ ನೀಡಲಾಗಿದೆ, ಈ ಬ್ಯಾಕ್ ಖಾತೆ ಸಂಖ್ಯೆಗೆ NFET/IMPS/CASH ಮೂಲಕ ಪಾವತಿಸಿ, ಬ್ಯಾಂಕ್ ನೀಡುವ ಪಾವತಿ ಚಲನ್ ಅನ್ನು ಸಾಫ್ಟವೇರ್ ಮೂಲಕ ಅಪ್ಲೋಡ್ ಮಾಡಬೇಕು, ನಂತರ ತಾವು ನೀಡಿರುವ ಇಮೇಲ್ ವಿಳಾಸಕ್ಕೆ ತಕ್ಷಣವೇ ನೋಂದಣಿ ಪ್ರಮಾಣ ಪತ್ರ ಮತ್ತು ರಶೀದಿ ಕಳುಹಿಸಲಾಗುತ್ತದೆ.

| | |
|---|---|
| Bank Name | Canara Bank |
| Account Holder Name | Indian Red Cross Society- Youth Red Cross |
| Account Number | 2827101016832 |
| IFSC CODE | CNRB0002827 |
| Branch Name | KSFC Complex , Thimmiah Road Bangalore |

ಈ ಕುರಿತಂತೆ ಯಾವುದೇ ಗೊಂದಲಗಳಿದ್ದಲ್ಲಿ ಈ ಕೆಳಗೆ ನೀಡಿರುವ ದೂರವಾಣಿ ಸಂಖ್ಯೆಗೆ ಸಂಪರ್ಕಿಸುವುದು

| SL No | Name of the | Designation | Mobile Number |
|---|---|---|---|
| 1 | IRCS KSB | Landline | 080-22264205 |
| 2 | Sri Ananda D.G | YRC Coordinator | 8147182172 |
| 3 | Ms. Anju J | SDA | 7337852629 |
| 4 | Ms. K. Vaishnavi | Data Entry Operator | 6362483274 |

ನೋಂದಣಿ ಶುಲ್ಕ ಮತ್ತು ವಿದ್ಯಾರ್ಥಿ ಶುಲ್ಕವನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ಅಭಿವೃದ್ಧಿಪಡಿಸಿರುವ ಸಾಫ್ಟ್‌ವೇರ್ ಮೂಲಕ ಪಾವತಿ ಮಾಡುವಂತೆ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ವ್ಯಾಪ್ತಿಗೆ ಒಳಪಡುವ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳಿಗೆ ಸುತ್ತೋಲೆ ಹೊರಡಿಸಲು ಈ ಮೂಲಕ ತಮ್ಮಲ್ಲಿ ವಿನಂತಿಸುತ್ತೇವೆ

ಗೌರವಪೂರ್ವಕ ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಉಮಾಕಾಂತ್

ಪ್ರಧಾನ ಕಾರ್ಯದರ್ಶಿಗಳು